**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯಾಲಯ ಅಫಜಲಪೂರ.**

**ಸಿ.ಸಿ. ನಂ.81/2018**

**ದೇವಲಗಾಣಗಾಪೂರ ಪೊಲೀಸ್ ಠಾಣೆ**

// ವಿರುದ್ಧ //

**ಜಗನಾಥ ಮತ್ತು ಇತರರು**

**ಃದೋಷಾರೋಪಣೆಃ**

1) **ಜಗನಾಥ ತಂದೆ ಬಸಣ್ಣ ಕಲಬುರಗಿ**
   ವಃ 50 ವರ್ಷ, ಉಃ ಒಕ್ಕಲುತನ,

2) **ಬಸಣ್ಣ ತಂದೆ ಜಗನಾಥ ಕಲಬುರ**
   ವಃ 28 ವರ್ಷ, ಉಃ ಕೂಲಿಕೆಲಸ

3) **ಶ್ರೀಮತಿ ಮರೇಮ್ಮ ಗಂಡ ಜಗನಾಥ ಕಲಬುರಗಿ**
   ವಃ 48 ವರ್ಷ, ಉಃ ಕೂಲಿ ಕೆಲಸ,
   ಎಲ್ಲರೂ ಸಾ|| ಕಿರಸಾವಳಗಿ ಗ್ರಾಮ, ತಾಃ ಅಫಜಲಪೂರ.
   ಆರೋಪಿತರಾದ ನಿಮ್ಮ ಮೇಲೆ...

ನಾನು **ಪ್ರಶಾಂತ ಬಾದವಾಡಗಿ,** ಬಿ.ಎ. ಎಲ್.ಎಲ್.ಬಿ. (ಸ್ಪೇಷಲ್) ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಅಫಜಲಪೂರ. ಆರೋಪಿಸುವುದೇನೆಂದರೆ,

ಮೊದಲನೆಯದಾಗಿ ದಿನಾಂಕಃ 21.07.2017 ರಂದು ಬೆಳಿಗ್ಗೆ 07.00 ಗಂಟೆಯ ಸಮಯದಲ್ಲಿ ಚಾಸಾ-1 ರವರು ತಮ್ಮ ಮನೆಯಲ್ಲಿದ್ದಾಗ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ ಮನೆಯ ಮುಂದೆ ಶೌಚಾಲಯ ಕಟ್ಟುವ ವಿಚಾರವಾಗಿ ಚಾಸಾ-1 ರವರ ಜೊತೆ ಜಗಳ ತೆಗೆದು ನಿಮ್ಮಲ್ಲಿ 1 ನೇ ಆರೋಪಿತನು 'ಏ ರಂಡಿ' ಎಂದು ಹಾಗೂ 3 ನೇ ಆರೋಪಿತಳು 'ಭೋಸಡಿ' ಎಂದು ಅವಾಚ್ಯ ಶಬ್ದಗಳಿಂದ ಬೈದು ಉದ್ದೇಶಪೂರ್ವಕವಾಗಿ ಅವಮಾನಗೊಳಿಸಿರುವ ಕಾರಣ **ಭಾರತ ದಂಡ ಸಂಹಿತೆ ಕಲಂಃ 504 ಸಹವಾಚಕ 34 ರಡಿಯಲ್ಲಿ** ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಅದೇ ಸಮಯದಲ್ಲಿ ಸದರಿ ವಿಷಯಕ್ಕಾಗಿ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ ನಿಮ್ಮಲ್ಲಿ 2 ನೇ ಆರೋಪಿತನು ಕೈಯಿಂದ ಬೆನ್ನಿಗೆ ಹೊಡೆದು ಸಾದಾ ಸ್ವರೂಪದ ಗಾಯ ಉಂಟುಪಡಿಸಿ ಆ ಮೂಲಕ **ಭಾರತ ದಂಡ ಸಂಹಿತೆ ಕಲಂಃ 323 ಸಹವಾಚಕ 34 ರಡಿಯಲ್ಲಿ** ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಮೂರನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಅದೇ ಸಮಯದಲ್ಲಿ ಸದರಿ ವಿಷಯಕ್ಕಾಗಿ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ ನಿಮ್ಮಲ್ಲಿ 3 ನೇ ಆರೋಪಿತಳ **'**ಈ ಭೋಸಡಿಗೆ ಜೀವಸಹಿತ ಬಿಡಬ್ಯಾಡರಿ ಜೀವಹೊಡೆದು ಖಲಾಸ ಮಾಡಿರಿ' ಎಂದು ಚಾಸಾ-1 ರವರಿಗೆ ಜೀವದ ಬೆದರಿಕೆ ಹಾಕಿ ಆ ಮೂಲಕ **ಭಾರತ ದಂಡ ಸಂಹಿತೆ ಕಲಂಃ 506 ಸಹವಾಚಕ 34 ರಡಿಯಲ್ಲಿ** ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಕೊನೇಯದಾಗಿ ಮೇಲೆ ವಿವರಿಸಿದ ದಿನಾಂಕ, ಸ್ಥಳ ಅದೇ ಸಮಯದಲ್ಲಿ ಸದರಿ ವಿಷಯಕ್ಕಾಗಿ ಆರೋಪಿತರಾದ ನೀವು ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ ನಿಮ್ಮಲ್ಲಿ 1 ನೇ ಆರೋಪಿತನು **'**ಇನ್ನೊಮ್ಮೆ ನಾವು ಕಟ್ಟುತ್ತಿರುವ ಶೌಚಾಲಯಕ್ಕೆ ತಕರಾರು ಮಾಡಿದರೆ ಸೀರೆ ಕಳೆದು ಹೊಡೆಯುತ್ತೇನೆ' ಎಂದು ಬೈದಾಡಿ ಚಾಸಾ-1 ರವರ ಮಾನಕ್ಕೆ ಕುಂದುಂಟು ಮಾಡಿ ಆ ಮೂಲಕ **ಭಾರತ ದಂಡ ಸಂಹಿತೆ ಕಲಂಃ 509 ಸಹವಾಚಕ 34 ರಡಿಯಲ್ಲಿ** ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ದಿನಾಂಕಃ 23.06.2018 ಜೆ.ಎಮ್.ಎಫ್.ಸಿ. ಅಫಜಲಪೂರ.

# <u>ಆರೋಪಿತರ ಹೇಳಿಕೆ</u>

ಪ್ರ-1 ನಿಮಗೆ ಮೇಲೆ ಓದಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೆ?
ಉಃ

ಪ್ರ-2 ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆ ಬಯಸುತ್ತಿಯೋ?
ಉಃ

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಆರೋಪಣೆಗಳನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರುಗಳು ನೀಡಿದ ಉತ್ತರವನ್ನು ಯತಾಸ್ಥಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತೆದೆ)

ದಿನಾಂಕಃ 23.06.2018 ಜೆ.ಎಮ್.ಎಫ್.ಸಿ. ಅಫಜಲಪೂರ.